ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**
ನೂರ ನಲವತ್ತಮೂರನೆಯ ಅಧಿವೇಶನ
ಗುರುವಾರ, ದಿನಾಂಕ: 4ನೇ ಫೆಬ್ರುವರಿ, 2021

ನೌಕರರ ಸರ್ಕಾರಿ ಜೀವವಿಮೆಯಲ್ಲಿನ ತೊಡಕುಗಳ ಬಗ್ಗೆ

ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನ ಸಭೆಯಿಂದ ಚುನಾಯಿತರಾದವರು):-

360(437) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೆ.ಜಿ.ಐ.ಡಿ., ಯಲ್ಲಿರುವ ನೌಕರರ ಅತೀ ಮುಖ್ಯ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು:

(ಆ) ಸರ್ಕಾರಿ ನೌಕರರ ನಿಯತಕಾಲಿಕ ಅವಧಿ ಮುಕ್ತಾಯದ ಕ್ಲೇಮುಗಳನ್ನು ಇತ್ಯರ್ಥಪಡಿಸುವಲ್ಲಿ ಮತ್ತು ಸಾಲ ನೀಡಿಕೆಯಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

(ಇ) ಸರ್ಕಾರಿ ನೌಕರರ ಅವಧಿ ಮುಕ್ತಾಯದ ಕ್ಲೇಮುಗಳ ಇತ್ಯರ್ಥಪಡಿಸುವಿಕೆ ಮತ್ತು ಸಾಲ ನೀಡಿಕೆಯನ್ನು ತ್ವರಿತಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು ?